04139

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2606

ಮಾನ್ಯ ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 24.03.2022

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ನೌಕರರು 90 ವರ್ಷ ದಾಟಿದ ಮೇಲೆ ಸಂಪೂರ್ಣ ಪಿಂಚಣಿ ಪಡೆಯಲು ಅರ್ಹನಲ್ಲವೆಂದು ಕಾರಣ ನೀಡಿ ಶೇಕಡ 10% ರಷ್ಟು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ: ಆಇ (ವಿ) 27 ಪಿಇಎನ್ 2007, ದಿನಾಂಕ: 13.10.2010ರಲ್ಲಿ 90 ವರ್ಷಗಳು ಮೀರಿದ ಪಿಂಚಣಿದಾರರಿಗೆ /ಕುಟುಂಬ ಪಿಂಚಣಿದಾರರಿಗೆ ಶೇ.50ರಷ್ಟು ಹೆಚ್ಚುವರಿ ಪಿಂಚಣಿಯನ್ನು ನೀಡಲಾಗುತ್ತಿತ್ತು.<br><br>ಸರ್ಕಾರದ ಆದೇಶ ಸಂಖ್ಯೆ: ಆಇ (ವಿ) 120 ಪಿಇಎನ್ 2018, ದಿನಾಂಕ: 11.01.2019ರಲ್ಲಿ ದಿನಾಂಕ: 01.01.2019ಕ್ಕೆ 90 ವರ್ಷಗಳು ಮೀರಿದ ಪಿಂಚಣಿದಾರರು/ಕುಟುಂಬ ಪಿಂಚಣಿದಾರರಿಗೆ ಶೇ.40ರಷ್ಟು ಪಿಂಚಣಿಯನ್ನು ನೀಡಲು ಆದೇಶಿಸಿದೆ.<br><br>ಆದರೆ, ದಿನಾಂಕ: 01.01.2019ಕ್ಕಿಂತ ಮುಂಚಿತವಾಗಿ 90 ವರ್ಷಗಳು ಮೀರಿದ ಪಿಂಚಣಿದಾರರು /ಕುಟುಂಬ ಪಿಂಚಣಿದಾರರಿಗೆ ಶೇ.50ರಷ್ಟು ಹೆಚ್ಚುವರಿ ಪಿಂಚಣಿಯನ್ನು ಮುಂದುವರೆಸಲಾಗಿದೆ. |
| ಆ) | ಈ ಇಳಿ ವಯಸ್ಸಿನಲ್ಲಿಔಷಧಿ ಮತ್ತು ಇತರ ಖರ್ಚುಗಳು ಹೆಚ್ಚಿರುವುದರಿಂದ ಪಿಂಚಣಿಯನ್ನು ಕಡಿತಗೊಳಿಸಿರುವುದು ಸಮಂಜಸವೇ? (ವಿಸ್ತೃತವಾದ ಮಾಹಿತಿ ನೀಡುವುದು) | |

ಆಇ-ಪಿಇಎನ್/90/2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECRETARY, CMO on 21/03/2022 06:06 PM